(ಇ) ತಾಂತ್ರಿಕ ತಜ್ಞರ ಕಣ್ಣಿದುರಿನಲ್ಲಿಯೇ ಇಂಥ ಘಟನೆ ನಡೆದಿದೆಯಾದ ಮೇಲೆ ಆ ವಿಭಾಗದಲ್ಲಿ ನಡೆಯುತ್ತಿರುವ ಬಾರಿ ಕಾಮಗಾರಿಗಳ ಹಿತದೃಷ್ಟಿ ಯಿಂದ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿಗಳು)

(ಅ) ಇಲ್ಲ. ಕುಸಿದು ಬಿದ್ದಿರುವುದು ಆಡಳಿತ ಕಛೇರಿಯ ಪಕ್ಕದಲ್ಲಿ ಕಟ್ಟುತ್ತಿರುವ ''ಬ್ರಹ್ಮಚಾರಿ ವಸತಿ'' ಗೃಹದ ವರಾಂಡದ ಮೇಲುಚಾವಣಿಯ ಒಂದು ಭಾಗ ಮಾತ್ರ.

(ಆ) ಆಕಸ್ಮಿಕ.

(ಇ) ಆಕಸ್ಮಿಕ ಘಟನೆಯಾದುದರಿಂದ, ಮಾನ್ಯ ಸದಸ್ಯರ ಸಂಶಯಕ್ಕೆ ಕಾರಣವಿಲ್ಲ.

ಶ್ರೀ ಎಂ ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ).—ಆಡಳಿತ ಕಛೇರಿಯ ಕಟ್ಟಡದ ಮೇಲ್ಚಾವಣಿ ಕುಸಿದು ಬಿದ್ದಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಇದನ್ನೂ ಆಕಸ್ಮಿಕವಾಗಿ ಬಿದ್ದುಹೋಗಿದೆ ಎಂದು ಹೇಳುವುದರಲ್ಲಿ ಅರ್ಥವಿದೆಯೇ ? ಮೇಲ್ಚಾವಣಿ ಕುಸಿದು ಬೆಳಲಿಕ್ಕೆ ಸೆಂಟರಿಂಗ್ ತೊಂದರೆಯೇ ? ಅದು ಯಾವರೀತಿ ಕುಸಿಯಿತು ; ಕುಸಿಯಲಿಕ್ಕೆ ಸಿಮೆಂಟಿನ ಗುಣಮಟ್ಟ ಕಡಿಮೆಯಾಗಿರುವುದು ಕಾರಣವೇ ? ಅಥವಾ ಕಬ್ಬಿಣದ ತೊಂದರೆಯಿಂದ ಆಗಿದೆಯೇ ? ಸ್ಥಳದಲ್ಲಿ ಮೇಲ್ವಿಚಾರಣೆ ಮಾಡ ತಕ್ಕಂತಹ ಸಿಬ್ಬಂದಿ ಏನು ಇದ್ದಾರೆ ಅವರಿಗೆ ಮೇಲಿನ ಉನ್ನತದರ್ಜೆಯ ವ್ಯಕ್ತಿಗಳ ರಕ್ಷಣೆ ಇದೆಯೇ ! ಅಥವಾ ಅಲ್ಲಿರುವ ಅಧಿಕಾರಿಗಳ ಉದಾಸೀನ ಮತ್ತು ಅಸಡ್ಡೆ ಪ್ರವೃತ್ತಿಯಿಂದ ಈ ರೀತಿ ಆಗಿದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಕುಸಿದು ಬಿದ್ದಿರುವುದು ಆಡಳಿತಕ್ಕೆ ಸಂಬಂಧಪಟ್ಟ ಕಟ್ಟಡ ಅಲ್ಲವೆಂದು ಹೇಳಿದ್ದೇನೆ. 'ಬ್ರಹ್ಮಚಾರಿ ವಸತಿ' ಗೃಹದ ವರಾಂಡದ ಮೇಲುಚಾವಣಿಯ ಒಂದು ಭಾಗ ಮಾತ್ರ ಕುಸಿದು ಬಿದ್ದಿದೆ. ಕುಸಿದು ಬಿದ್ದಿರುವುದಕ್ಕೆ ಕಾರಣ ಚಾವಣಿ ಹಾಕಲಿಕ್ಕೆ ಸಾರ್ವೆ ಕಟ್ಟಿದ್ದರು. ದನಗಳು ಮೈ ಉಜ್ಜಿಕೊಳ್ಳುವಾಗ ಸಡಿಲವಾಗಿ ಚಾವಣಿ ಬೀಳಲಿಕ್ಕೆ ಕಾರಣವಾಯಿತು ಎನ್ನುವ ವರದಿ ಬಂದಿದೆ. ಅದನ್ನೂ ತಪಾಸಣೆ ಮಾಡಿ ಒಂದು ವೇಳೆ ತಾವು ಹೇಳತಕ್ಕ ವಿಷಯಗಳು ಇದ್ದರೆ ಅದನ್ನು ಗಮನದಲ್ಲಿಟ್ಟು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಎಂ. ಪುಟ್ಟಸ್ವಾಮಿಗೌಡ.—ಅಲ್ಲಿಯೇ ೯೦ ಲಕ್ಷ ರೂಪಾಯಿ ಅಂದಾಜಿನ ಅಕ್ವಡಕ್ಟ್ ಕೆಲಸವಾಗುತ್ತಿದೆ. ಅದರ ಮೇಲ್ವಿಚಾರಣೆಯನ್ನು ಕಾಮಗಾರಿ ಇಲಾಖೆಯವರೇ ನಡೆಸಂತ್ತಾರೆ. ಅದು ಸರಿಯಾಗಿ ನಡೆಯುತ್ತಿಲ್ಲ. ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲವೆಂದು ವಿಜಿಲೆನ್ಸ್‌ಗೆ ದೂರು ಹೋಗಿದೆ. ಸಂಬಂಧಪಟ್ಟ ಮಂತ್ರಿಗಳಿಗೆ ದೂರು ಬಂದರೆ ಅದು ಆಕಸ್ಮಿಕ ಎನ್ನುವ ಪದ ಬಳಸಿರುವುದು ಸರಿಯಲ್ಲ. ತಾಂತ್ರಿಕದೋಷಗಳಿಂದ ಕಟ್ಟಡ ಕುಸಿದಿದೆ ಮುಂದೆ ಆಗತಕ್ಕ ಕೆಲಸಕಾರ್ಯಗಳಿಗೆ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕು. ಜನರಲ್ಲಿರುವ ಕಳವಳವನ್ನು ಗಮನಿಸಿ ಈ ಪ್ರಶ್ನೆಯನ್ನು ಹಾಕಿತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕೆಲಸ ಚಿಕ್ಕದು ದೊಡ್ಡದು ಅನ್ನುವುದಕ್ಕೆ ಬದಲಾಗಿ, ತಾಂತ್ರಿಕ ದೋಷವಿದ್ದರೆ ವಿಚಾರಣೆ ಮಾಡುವುದು ಸರ್ಕಾರದ ಜವಾಬ್ದಾರಿ ಇದೆ. ವಿಜಿಲೆನ್ಸ್‌ನವರ ಎನ್‌ಕ್ವೈರಿ ಆಗಂತ್ತದೆ. ವಿಜಿಲೆನ್ಸ್‌ನವರು ಹಲವಾರು ವಿಷಯಗಳ ಮೇಲೆ ನೇರವಾಗಿ ವಿಚಾರಣೆ ಮಾಡಬಹುದು. ಈ ವಿಚಾರದಲ್ಲಿ ತಾಂತ್ರಿಕದೋಷ ಆ ಒಂದು ಹಿನ್ನಲೆಯಲ್ಲಿ ಕೆಲಸ ಆಗಿದ್ದರೆ ಆದರ ಬಗ್ಗೆ ವಿಚಾರ ಮಾಡುತ್ತೇನೆ. ನನಗೆ ಬಂದಿರುವ ವರದಿ ಸಾರ್ವೆ ಕಟ್ಟಿದ್ದನ್ನು ದನಗಳು ನೂಕಿಕೊಂಡು ಹೋದಾಗ ಈ ರೀತಿಯಾಗಿದೆ ಎಂದು ವರದಿ ಬಂದಿದೆ. ಆದರ ಬಗ್ಗೆ ವಿವರ ತರಿಸಿ ನಾನು ನೋಡುತ್ತೇನೆ.

ವಿಷಯ :—ಹೊನ್ನಾಳಿ ತಾಲ್ಲೂಕಿನಲ್ಲಿ ಹೊಳೆಸಿರಳಹಳ್ಳಿ, ದಿಡಗೂರು, ನೇವರ ಹೊನ್ನಾಳಿ, ಬಳ್ಳಾಪುರ ಮತ್ತು ಹರಳಿಹಳ್ಳಿ ಗ್ರಾಮಗಳಿಗೆ ತುಂಗಾಭದ್ರಾ ನದಿಯಿಂದ ಪಿತ ನೀರಾವರಿ ಯೋಜನೆಗಳನ್ನು ನಿರ್ಮಿಸುವ ಬಗ್ಗೆ.

ಸಂಖ್ಯೆ ೧೩೧

ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ)*.—ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ಹೊಳೆಹರಳಹಳ್ಳಿ, ದಿಡಗೂರು, ದೇವರ ಹೊನ್ನಾಳಿ, ಬಳ್ಳಾಪುರ, ಮತ್ತು ಹುರಳಿಹಳ್ಳಿ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಏತ ನೀರಾವರಿ ಯೋಜನೆ ತಯಾರಾಗಿ ಕಾರ್ಯಗತವಾಗದಿರುವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕೆಲಸವನ್ನು ಸರಕಾರ ಕೈಗೊಳ್ಳುವುದೇ ?

ಇ) ಈ ಕೆಲಸ ತತ್ವರವಾಗಲು ಇರುವ ತಾಂತ್ರಿಕ ತೊಂದರೆಗಳಾವುವು ?

ಶ್ರೀ ಆರ್. ಎಸ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು) —

ಅ) ಬಂದಿದೆ.

ಆ) ಈ ಯೋಜನೆಗಳು ಬಜೆಟ್‌ನಲ್ಲಿ ಸೇರಿ, ಆಡಳಿತ ಮತ್ತು ತಾಂತ್ರಿಕ ಮಂಜೂರಾತಿ ದೊರೆತೊಡನೆ ಪ್ರಾರಂಭಿಸಲ್ಪಡುವುವು.

ಇ) ದಿಡಗೂರು ಏತ ನೀರಾವರಿ ಕೆಲಸದ ಹೊರತಾಗಿ ಉಳಿದ ಯೋಜನೆಗಳು ೮೨-೮೩ರ ಬಜೆಟ್ ಸೇರಿಲ್ಲ. ಎಲ್ಲಾ ಯೋಜನೆಗಳ ತಾಂತ್ರಿಕ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. ದಿಡಗೂರು ಏತ ನೀರಾವರಿ ಕೆಲಸವು ೮೨-೮೩ರ ಬಜೆಟ್‌ನಲ್ಲಿ ಸೇರಿದ್ದರೂ ಈ ಕೆಲಸಕ್ಕೆ ಅನುದಾನ ನೀಡಿಲ್ಲದುದರಿಂದ ಮಂಜೂರಾತಿ ದೊರೆತಿಲ್ಲ.

ಶ್ರೀ ಪಿ. ಗೋವಿಂದ ಒಡೆಯರಾಜ್.—ಸ್ವಾಮಿ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ನನಗೆ ಇದುವರೆಗೂ ಅಲ್ಪಕಾಲಾವಧಿ ಪ್ರಶ್ನೆಗೆ ಉತ್ತರವನ್ನು ಕೊಡಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಮಾನ್ಯ ಸದಸ್ಯರಿಗೆ ಉತ್ತರ ಕೊಡುವುದಕ್ಕೆ ನನಗೆ ಆತಂಕವೇನೂ ಇಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ ನಮ್ಮ ಪ್ರಶ್ನೆಗೆ ಉತ್ತರ ಕೊಡುವುದು ನಿಮ್ಮ ಧರ್ಮ, ಮತ್ತು ಕರ್ತವ್ಯ ಕೂಡ ಇದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಮಾನ್ಯ ಸದಸ್ಯರ ತ್ವರೆಯ ಏನು ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ ನಿನ್ನೆಯ ದಿವಸ ಮಾನ್ಯ ಸದಸ್ಯರ ಪ್ರಶ್ನೆ ನನ್ನ ಗಮನಕ್ಕೆ ಬಂತು. ಆಗ ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಂಡು ಇನ್ನು ಎರಡು ದಿವಸಗಳಲ್ಲಿ ಈ ಸದನ ಮುಗಿಯುತ್ತದೆ ಎನ್ನುವ ಉದ್ದೇಶದಿಂದ ನಮ್ಮ ಕಾರ್ಯಾಲಯಕ್ಕೆ ತಿಳಿಸಿ ಉತ್ತರವನ್ನು ತರಿಸಿ ಕೊಂಡಿದ್ದೇನೆ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಕಾಪಿಯನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ನನ್ನನ್ನು ಅನ್ಯಥಾ ಭಾವಿಸಬಾರದು ನಾನು ತರಿಸಿಕೊಂಡಿರತಕ್ಕಂಥ ಉತ್ತರವನ್ನು ಮಾನ್ಯ ಸದಸ್ಯರಿಗೆ ಓದಿ ಹೇಳುತ್ತೇನೆ.

96. Sri K. VASANTHA BANGERA (Belthangadi).—Will the Hon. Minister of State for Forests be pleased to state.—

(a) Whether it has come to the notice of Government that 14 families out of 125 families who have been settled down at Patrame, Belthangadi Taluk since 3 5 years duly encroaching the Government forest land, have been forcibly evicted with the help of police damaged and burnt their houses and also destroyed their standing crops.

---

* Member not present.